

# ಸರ್ಕಾರಿ ಶಾಲೆಯಲ್ಲಿ ಸಹಕಾರ ಬ್ಯಾಂಕ್!

ಚಿತ್ರ- ಬರಹ: ಗಣಂಗೂರು ನಂಜೇಗೌಡ



ವಿದ್ಯಾರ್ಥಿ ಸಹಕಾರ ಬ್ಯಾಂಕ್‌ಗೆ ಹಣ ಕಟ್ಟುತ್ತಿರುವ ವಿದ್ಯಾರ್ಥಿ.

ಸರ್ಕಾರಿ ಶಾಲೆ ಎಂದರೆ ಮೂಗು ಮುರಿಯುವ ಪರಿಸ್ಥಿತಿ ಬಂದಿದೆ. ಈ ಮಾತಿಗೆ ಅಪವಾದ ಎಂಬಂತೆ ಶ್ರೀರಂಗಪಟ್ಟಣ ತಾಲ್ಲೂಕಿನ ಪುಟ್ಟ ಹಳ್ಳಿಯೊಂದರ ಸರ್ಕಾರಿ ಶಾಲೆಯಲ್ಲಿ 'ವಿದ್ಯಾರ್ಥಿ ಸಹಕಾರ ಬ್ಯಾಂಕ್' ಕಳೆದ ನ.14ರಿಂದ ಆರಂಭಗೊಂಡಿದ್ದು, ಯಶಸ್ವಿಯಾಗಿ ವ್ಯವಹಾರ ನಡೆಸುತ್ತಿದೆ.

ಅಚ್ಚಪ್ಪನಕೊಪ್ಪಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ದಿನಾಚರಣೆ ದಿನದಂದೇ ಶಿಕ್ಷಕ ವರ್ಗ ವಿದ್ಯಾರ್ಥಿಗಳಿಗಾಗಿ ಸಹಕಾರ ಬ್ಯಾಂಕ್ ಆರಂಭಿಸಿದೆ. ವಾಣಿಜ್ಯ ಬ್ಯಾಂಕ್‌ಗಳ ಮಾದರಿಯಲ್ಲಿ ಈ ಶಾಲಾ ಬ್ಯಾಂಕ್ ಕಾರ್ಯ ನಿರ್ವಹಿಸುತ್ತಿದೆ. ವಿದ್ಯಾರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ಸದಸ್ಯತ್ವ ಪಡೆಯಬೇಕು. ಸದಸ್ಯತ್ವ ಪಡೆದ ಪ್ರತಿ ವಿದ್ಯಾರ್ಥಿಗೆ ಪಾಸ್ ಪುಸ್ತಕ ವಿತರಿಸುವ ಜತೆಗೆ ವಿದ್ಯಾರ್ಥಿ ಪೋಷಕರನ್ನು ನಾಮ ನಿರ್ದೇಶನ ಮಾಡಿ ಕೊಳ್ಳಲಾಗುತ್ತದೆ. ಬ್ಯಾಂಕ್‌ನ ಸದಸ್ಯ ವಾರದಲ್ಲಿ 5 ರೂಪಾಯಿಗೆ ಮೇಲ್ಪಟ್ಟು ಎಷ್ಟು ಹಣ ಬೇಕಾದರೂ ಕಟ್ಟಬಹುದು. ಈ ಬ್ಯಾಂಕ್‌ಗೆ ಮುಖ್ಯ ಶಿಕ್ಷಕಿ ವ್ಯವಸ್ಥಾಪಕರಾಗಿದ್ದು, ಸಹ ಶಿಕ್ಷಕಿಯೊಬ್ಬರು ಖಜಾಂಚಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯ ಬ್ಯಾಂಕ್‌ಗೆ ವಿದ್ಯಾರ್ಥಿಗಳು ಕಟ್ಟಿದ ಹಣವನ್ನು ಅಂದೇ ಗ್ರಾಮದ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್‌ಗೆ ಜಮಾ ಮಾಡಲಾಗುತ್ತಿದೆ.

ಶಾಲೆಯಲ್ಲಿ 130 ವಿದ್ಯಾರ್ಥಿಗಳಿದ್ದು, ಈ ಪೈಕಿ 95 ವಿದ್ಯಾರ್ಥಿಗಳು ಶಾಲೆಯ ಬ್ಯಾಂಕ್‌ನಲ್ಲಿ ಖಾತೆ ತೆರೆದಿದ್ದಾರೆ. ವಿದ್ಯಾರ್ಥಿಗಳು ತಾವು ಬ್ಯಾಂಕ್‌ಗೆ ಕಟ್ಟಿದ ಹಣವನ್ನು ಶಾಲೆ ಆರಂಭದಲ್ಲಿ ವಾಪಸ್ ಪಡೆಯಬಹುದು. ನೋಟ್‌ಬುಕ್, ಪೆನ್ ಇತರ ಕಲಿಕಾ ಸಾಮಗ್ರಿ ಕೊಳ್ಳಲು ತಮ್ಮ ಖಾತೆಯ ಹಣವನ್ನು ವಿದ್ಯಾರ್ಥಿಗಳು ಬಳಸಿಕೊಳ್ಳಲು ಅವಕಾಶ ಇದೆ. ಶೈಕ್ಷಣಿಕ ಪ್ರವಾಸಕ್ಕೂ ಬಳಸಿಕೊಳ್ಳುವ ಚಿಂತನೆ ಶಿಕ್ಷಕರದ್ದು. ಶಾಲೆಯಲ್ಲಿ ಮೀನಾ ತಂಡ (ಕಾಲ್ಪನಿಕ ವಿದ್ಯಾರ್ಥಿನಿಯ ಯಶೋಗಾಥೆ ಬಿಂಬಿಸುವ ಪರಿಕಲ್ಪನೆ) ರಚನೆಯಾಗಿದ್ದು, ಶೈಕ್ಷಣಿಕ ಪ್ರಗತಿಗೆ ಪೂರಕವಾಗಿ ಬ್ಯಾಂಕ್ ತೆರೆಯಲಾಗಿದೆ ಎನ್ನುವುದು ಬ್ಯಾಂಕ್ ಆರಂಭವಾಗಲು ಮುಖ್ಯ ಪಾತ್ರ ವಹಿಸಿರುವ ಶಾಲೆಯ ಸಹ ಶಿಕ್ಷಕಿ ಗೀತಾ ಎಂ.ಹೆಗಡೆ ಅವರ ವಿವರಣೆ.

ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಬೆಳೆಸಲು ಮಕ್ಕಳ ಚಿತ್ರ, ಕತೆ, ಕವನಗಳನ್ನು ಒಳಗೊಂಡ 'ಕಿಶೋರು ಕಡಲು' ಹೆಸರಿನ ಮಾಸ ಪತ್ರಿಕೆಯನ್ನು ಶಾಲೆ ಹೊರ ತರುತ್ತಿದೆ. ಕೇವಲ 4 ತಿಂಗಳ ಅವಧಿಯಲ್ಲಿ ಶಿಕ್ಷಕರ ತಂಡ 1500 ಪುಸ್ತಕಗಳನ್ನು ದಾನಿಗಳಿಂದ ಸಂಗ್ರಹಿಸಿ ತಮ್ಮ ಶಾಲಾ ಗ್ರಂಥಾಲಯವನ್ನು ಸಮೃದ್ಧಗೊಳಿಸಿದೆ. ವಿಜ್ಞಾನ, ಗಣಿತ, ಭಾಷೆ, ಕತೆ, ಕವನ, ಪ್ರವಾಸ ಕಥನ, ಜಾನಪದ ಇತರ ಬಗೆ ಬಗೆಯ ಪುಸ್ತಗಳು ಅಲ್ಲಿವೆ. ಪ್ರತಿ ವಿದ್ಯಾರ್ಥಿಗೆ ಶಾಲಾ ಗುರತಿನ ಕಾರ್ಡ್ ಹಾಗೂ ಗ್ರಂಥಾಲಯ ಕಾರ್ಡ್ ವಿತರಿಸಲಾಗಿದೆ. ಟೈ, ಬೆಲ್ಟ್, ಶೂ ಕಡ್ಡಾಯ ಮಾಡಿದ್ದು ಇನ್ಫೋಸಿಸ್ ಸಂಸ್ಥೆಯಿಂದ ಕಂಪ್ಯೂಟರ್ ಪಡೆದು ಅದರ ಬಳಕೆ ಕುರಿತು ಮಕ್ಕಳಿಗೆ ತರಬೇತಿ ನೀಡಲಾಗುತ್ತಿದೆ. ಆ ಮೂಲಕ 'ಖಾಸಗಿ ಶಾಲೆಗಿಂತ ಸರ್ಕಾರಿ ಶಾಲೆಯೇನು ಕಮ್ಮಿಯಿಲ್ಲ' ಎಂಬುದನ್ನು ತೋರಿಸಿಕೊಡುವ ಮಾದರಿ ಕೆಲಸಕ್ಕೆ ಶಿಕ್ಷಕ ವರ್ಗ ಮುಂದಾಗಿದೆ. ■



ಮೀನಾ ತಂಡದ ಜತೆ ಶಿಕ್ಷಕಿ ಗೀತಾ ಎಂ.ಹೆಗಡೆ



ಶಾಲೆಯ ಗ್ರಂಥಾಲಯ